- ಶ್ರೀಮತಿ ಪ್ರಮೀಳ ನೇಸರ್ಗಿ
- ಶ್ರೀ ಹೆಚ್.ಎನ್.ನಂಜೇಗೌಡ
- ಶ್ರೀ ಸಿದ್ಧರಾಮಯ್ಯ
(ಉಪಮುಖ್ಯಮಂತ್ರಿಗಳು).

ಮಂಗಳವಾರ ೧೬ನೇ ಜುಲೈ ೧೯೯೬,

1. ಸಚಿವರ ಹೇಳಿಕೆ:- ಗ್ರಾಮ ಪಂಚಾಯಿತಿ ಸದಸ್ಯರುಗಳಿಗೂ ಮೇಲ್ಮನೆ ಸದಸ್ಯರ ಚುನಾವಣೆಯಲ್ಲಿ ಮತ ನೀಡುವ ಹಕ್ಕು. 1070
- ಶ್ರೀ ಎಂ.ಸಿ.ನಾಣಯ್ಯ
(ಕಾನೂನು ಸಚಿವರು)
- ಶ್ರೀ ಬಿ.ಎಸ್.ಯಡಿಯೂರಪ್ಪ,
(ವಿರೋಧ ಪಕ್ಷದ ನಾಯಕರು)
- ಶ್ರೀ ಜಿ.ವಿ.ಶ್ರೀರಾಮರೆಡ್ಡಿ

2. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 1073

3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 1126

4. ಅಧ್ಯಕ್ಷರ ಅಪ್ಪಣೆ ಮೇರೆಗೆ 1227

(ಅ) ಹೈಕೋರ್ಟಿನ ನ್ಯಾಯಾಧೀಶರಿಗೆ ಸರ್ಕಾರಿ ಮನೆಗಳನ್ನು ನೀಡುವ ಬಗ್ಗೆ. 1227
- ಶ್ರೀಮತಿ ಪ್ರಮೀಳಾ ನೇಸರ್ಗಿ
- ಶ್ರೀ ಜಿ.ವಿ.ಶ್ರೀರಾಮರೆಡ್ಡಿ
- ಶ್ರೀ ಬಿ.ಎಸ್.ಯಡಿಯೂರಪ್ಪ

- ಶ್ರೀ ಹೆಚ್.ಎನ್.ನಂಜೇಗೌಡ

- ಶ್ರೀ ಎಂ.ಸಿ.ನಾಣಯ್ಯ

(ಕಾನೂನು ಸಚಿವರು)

(ಆ) ಆಲಮಟ್ಟಿ ಡ್ಯಾಮ್ ಕುರಿತು. 1283

- ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ

- ಶ್ರೀ ವಾಟಾಳ್ ನಾಗರಾಜ್,

- ಶ್ರೀ ಹೆಚ್.ಎನ್.ನಂಜೇಗೌಡ

- ಶ್ರೀ ಕೆ.ಎನ್.ನಾಗೇಗೌಡ

(ಭಾರಿ ನೀರಾವರಿ ಸಚಿವರು)

- ಶ್ರೀ ಎಂ.ವೀರಪ್ಪ ಮೊಯಿಲಿ

(ಇ) ಕರ್ನಾಟಕ ರಾಜ್ಯದ ಸುಮಾರು ಶೇಕಡ ಅರ್ಧಾಂಶ ಕಾನೂನು ಕಾಲೇಜುಗಳಿಗೆ ಭಾರತೀಯ ಬಾರ್ ಕೌನ್ಸಿಲ್ ಮಾನ್ಯತೆ ನೀಡದಿರುವ ಬಗ್ಗೆ. 1310

- ಶ್ರೀ ಯು.ಆರ್.ಸಭಾಪತಿ

- ಶ್ರೀ ಎಂ.ಸಿ.ನಾಣಯ್ಯ

(ಕಾನೂನು ಸಚಿವರು)

(ಈ) ಬೆಂಗಳೂರಿನ ಪೋಲೀಸ್ ಕಮಿಷನರ್ ಆಫೀಸ್ ಕುರಿತು. 1313

- ಶ್ರೀ ಎಸ್.ಸುರೇಶ್ ಕುಮಾರ್

(ಉ) ಬೀದರ್ ಮುನಿಸಿಪಾಲಿಟಿ ಕಛೇರಿಯಲ್ಲಿ ಸ್ಕೇರ್ಸಿಟಿ ಮೀಟಿಂಗ್‌ನಲ್ಲಿ ಹಣ ಹಂಚಿಕೆಯಲ್ಲಿ ತಾರತಮ್ಯ. 1315

- ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ

(ಊ) ಜನ ಪ್ರತಿನಿಧಿಗಳಿಗೆ ಭೂನ್ಯಾಯಮಂಡಳಿಯಲ್ಲಿ
ಗೌರವ 1318
- ಶ್ರೀ ಸಿ.ಆರ್.ಸಗೀರ್ ಅಹ್ಮದ್

5. ನಿಯಮ 351ರ ಮೇರೆಗೆ. 1324

(ಅ) ಉಳ್ಳಾಲದ ಮೊಗವೀರ ಪಟ್ಟಣದ ವ್ಯಾಘ್ರ
ಚಾಮುಂಡೇಶ್ವರಿ ದೇವಸ್ಥಾನದ ಅರ್ಚಕರು ಮತ್ತಿತರ
ಸಿಬ್ಬಂದಿಗಳಿಗೆ ಹೊಡೆದುದರ ಪರಿಣಾಮ ಕುರಿತು. 1324
- ಶ್ರೀ ಕೆ.ಜಯರಾಮಶೆಟ್ಟಿ

(ಆ) ವಿಟ್ಲ ಪ್ರಥಮ ದರ್ಜೆ ಕಾಲೇಜಿನಲ್ಲಿ
ಉಪನ್ಯಾಸಕರು ಮತ್ತು ಸಿಬ್ಬಂದಿಗಳ ಕೊರತೆ 1326
- ಶ್ರೀ ಎ.ರುಕ್ಕಯ್ಯ ಪೂಜಾರಿ

(ಇ) ಹಿರೇಕೆರೂರು ತಾಲ್ಲೂಕು ಮದಗಮಾಸೂರು ಕೆರೆಯ
ಎಡದಂಡೆಯ ಕಾಲುವೆಗಳ ಹೂಳು ತೆಗೆಸುವುದು. 1327
- ಶ್ರೀ ಯು.ಬಿ.ಬಣಕಾರ್

(ಈ) ಕೊಪ್ಪಳ ತಾಲ್ಲೂಕಿನಲ್ಲಿ ಮಂಜೂರಾದ ಏತ
ನೀರಾವರಿ ಯೋಜನೆಗಳಿಗೆ ಹಣ ಒದಗಿಸಿ
ಕಾರ್ಯಾರಂಭಗೊಳಿಸುವುದು 1327
- ಶ್ರೀ ಕರಡಿ ಸಂಗಣ್ಣ

(ಉ) ಹೊಸದುರ್ಗ ತಾಲ್ಲೂಕಿನಲ್ಲಿ 1995-96ನೇ
ಸಾಲಿನ ಫಲಾನುಭವಿಗಳಿಗೆ ವಿತರಿಸಿದ ಸಸಿಗಳು 1328
- ಶ್ರೀ ಟಿ.ಹೆಚ್.ಬಸವರಾಜ್

(ಊ) ಮಂಗಳೂರು ವಿಭಾಗಕ್ಕೆ ಐಟಿಕೆ ಮತ್ತು
ಸೆಮಿಲುಕ್ಸರಿ ಬಸ್ 1328
- ಶ್ರೀ ಎಸ್.ಯೋಗೀಶ್ ಭಟ್

(ಞ) ಧಾರವಾಡ ಜಿಲ್ಲೆ ಶಿರಹಟ್ಟಿ ತಾಲ್ಲೂಕು ಮಜ್ಜೂರ
ಗ್ರಾಮದ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ 1328
- ಶ್ರೀ ಡಿ.ಆರ್.ಪಾಟೀಲ್.

6. ಗಮನ ಸೆಳೆಯುವ ಸೂಚನೆ. 1330

(ಅ) ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆಯ
ಆಡಳಿತ ಮಂಡಳಿಗೆ ಚುನಾವಣೆ ನಡೆಸುವಂತೆ
ಒತ್ತಾಯಿಸಿ ಸದಸ್ಯರು ಧರಣಿ. 1330
- ಶ್ರೀ ವಿ.ಎನ್.ಕೌಜಲಗಿ

(ಆ) ಪುತ್ತೂರು ಹಾಗೂ ಸುಳ್ಯ ತಾಲ್ಲೂಕಿನ ಶಾಲಾ,
ಕಾಲೇಜುಗಳು ವಿದ್ಯಾರ್ಥಿಗಳಿಗೆ ಬಸ್ ಪಾಸ್
ನೀಡದಿರುವುದರಿಂದ ಉಂಟಾಗಿರುವ ತೊಂದರೆ 1332
- ಶ್ರೀ ಡಿ.ವಿ.ಸದಾನಂದಗೌಡ

7. ಮಂತ್ರಿಗಳ ಹೇಳಿಕೆ 1336

(ಅ) ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಂಕಪಟ್ಟಿ ಹಗರಣ 1336
- ಬಿ.ಸೋಮಶೇಖರ್
(ಉನ್ನತ ಶಿಕ್ಷಣ ಸಚಿವರು)

8. ಅರ್ಧ ಗಂಟೆ ಕಾಲಾವಧಿ ಚರ್ಚೆ 1337

ಪ್ರಸಕ್ತ ವರ್ಷದ ಬೆಳಗಾಂ ಮತ್ತು ಖಾನಾಪುರ
ತಾಲ್ಲೂಕುಗಳಲ್ಲಿ ಕಬ್ಬಿನ ಬೆಲೆಯಲ್ಲಿ ಹೆಚ್ಚಳ. 1337
- ಶ್ರೀ ಬಿ.ಐ.ಪಾಟೀಲ್
- ಶ್ರೀ ಶ್ರೀಕಾಂತ ರುದ್ರಪ್ಪ ಅಂಬಡಗಟ್ಟಿ
- ಶ್ರೀ ನಾರಾಯಣರಾವ್ ತಾರಾಳೆ
- ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ.
- ಶ್ರೀ ಚಂದ್ರಶೇಖರ ಸದಾಶಿವನಾಯಕ

- ಶ್ರೀ ಟಿ.ಎಂ.ಚಂದ್ರಶೇಖರಯ್ಯ
- ಶ್ರೀ ಮಂಜುನಾಥ ಸಿ.ಕುನ್ನೂರ್
- ಶ್ರೀ ಎಸ್.ಕೃಷ್ಣಪ್ಪ
- ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ,
- ಶ್ರೀ ಕೆ.ಎಸ್.ಪುಟ್ಟಣ್ಣಯ್ಯ
- ಶ್ರೀ ವಾಟಾಳ್ ನಾಗರಾಜ್
- ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ
- ಶ್ರೀ ಸಿ.ಹೆಚ್.ವಿಜಯಶಂಕರ್
- ಶ್ರೀ ಉಮೇಶ್ ಕತ್ತಿ

(ಸಕ್ಕರೆ ಸಚಿವರು)

ಕರ್ನಾಟಕ ವಿಧಾನ ಸಭೆ

ಬುಧವಾರ 10ನೇ ಜುಲೈ 1996ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು:- ಶ್ರೀ ರಮೇಶ್‌ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು.

ವಿಷಯ:- ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟಿರುವ ಬಗ್ಗೆ ವಿಶೇಷ ಪ್ರಸ್ತಾವ ಮಂಡನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನಿನ್ನೆ ತಮ್ಮ ಕೊಠಡಿಗೆ ಬಂದು ಮಾತುಕತೆ ನಡೆಸಿ ಸುಸೂತ್ರವಾಗಿ ಸಮಸ್ಯೆ ಬಗೆಹರಿಯಬೇಕೆಂದು ಹೇಳಿ ನಿಯಮ 159ರ ಪ್ರಕಾರ ಸಾರ್ವಜನಿಕ ಹಿತದೃಷ್ಟಿಯಿಂದ ಒಂದು ವಿಶೇಷ ಪ್ರಸ್ತಾವವನ್ನು ಈ ಕಡೆ ಇರುವವರೆಲ್ಲಾ ಸೇರಿ ಕಳುಹಿಸಿಕೊಟ್ಟಿದ್ದೆವು. ಈಗ ಪ್ರಶ್ನೋತ್ತರ ವೇಳೆ ನಡೆಯಲಿ, ಆದು ಆದ ತಕ್ಷಣ ಇದಕ್ಕೆ ಆದ್ಯತೆ ಕೊಟ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ತಮಗೆ ಸಾಧ್ಯವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ ನನಗೆ. ಇದರಿಂದ ಸರ್ಕಾರಕ್ಕೂ ಅನುಕೂಲವಾಗುತ್ತದೆ ಮತ್ತು ನಮಗೂ ಅನುಕೂಲವಾಗುತ್ತದೆ. ನಾವು ಯಾರಾದರೂ ಇಬ್ಬರು ಮೂರು ಜನ ಕೆ.ಆರ್.ಎಸ್.ಗೆ ಹೋಗಿಬರುತ್ತೇವೆ. ಆ ಕಡೆಯಿಂದ ಯಾರಾದರೂ ಮಂತ್ರಿಗಳು ಅಥವಾ ಅಧಿಕಾರಿಗಳು ಬಂದರೆ ಕೆ.ಆರ್.ಎಸ್.ನಲ್ಲಿ ನೀರಿನ ಮಟ್ಟ ಎಷ್ಟಿದೆಯೆಂದು ಸತ್ಯಸಂಗತಿಯನ್ನು ತಿಳಿದುಕೊಂಡು ಬಂದು ವರದಿಯನ್ನು ಕೊಟ್ಟರೆ, ಇದು ಹೆಚ್ಚು ಉಪಯೋಗವಾಗುತ್ತದೆ. ಸರ್ಕಾರ ಎಷ್ಟರಮಟ್ಟಿಗೆ ಸತ್ಯಸಂಗತಿಯನ್ನು ಹೇಳುತ್ತಿದೆ ಎಂಬುದು ಗೊತ್ತಾಗುತ್ತದೆ. ನಾನು ಸಲಹೆ ಕೊಡುತ್ತಾ ಇದ್ದೇನೆ, ಇದನ್ನು ತಾವು ದಯಮಾಡಿ ಯೋಚನೆ ಮಾಡಿ ನೋಡಿ. ಸಭಾನಾಯಕರು ಬಂದಮೇಲೆ ನಾನು ವಿನಂತಿ ಮಾಡುತ್ತೇನೆ. ಈ ಚರ್ಚೆಯಾಗುತ್ತಾ ಇದ್ದಹಾಗೆ ಕೆ.ಆರ್.ಎಸ್‌ಗೆ ಹೋಗಿಬಂದರೆ ನೀರಾವರಿ ಸಚಿವರು ಏನು ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಾರೆ ಅದನ್ನು ಸರಿಪಡಿಸಲಿಕ್ಕೆ ಅನುಕೂಲವಾಗುತ್ತದೆ. ಇಲ್ಲದೆ ಹೋದರೆ ಇಡೀ ದೇಶದ ಜನತೆಗೆ ನೀರು ಇದ್ದರೂ ಬಿಡಲಿಲ್ಲ ಎನ್ನುವಂಥ ತಪ್ಪುಗ್ರಹಿಕೆ ಆಗುತ್ತದೆ.

ಅಧ್ಯಕ್ಷರು:- ಇದು ಅತ್ಯುತ್ತಮ ಸಲಹೆ. ಇದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ.

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):- ಮಾನ್ಯ ಅಧ್ಯಕ್ಷರೆ, ನಿನ್ನೆಯೂ ಸಹ ಮುಖ್ಯಮಂತ್ರಿಗಳು ಹೇಳಿದ್ದಾರೆ. ತಾವು ಯಾರ್ಯಾರು ಹೋಗುವವರು ಇದ್ದೀರಿ, ಹೊಗುವವರು ಇದ್ದರೆ ಖಂಡಿತ ನಾವು ಎಲ್ಲಾ ವ್ಯವಸ್ಥೆ ಮಾಡುತ್ತೇವೆ. ಹೋಗೋಣ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದರಲ್ಲಿ ಯಾವ ತಪ್ಪು ಮಾಹಿತಿಯೂ ಇಲ್ಲ. ನಾನು ತಮ್ಮ ಹತ್ತಿರ ಏನು ಬೆಳಿಗ್ಗೆ ಫಿಗರ್ಸ್ ಹೇಳಿದ್ದೇನೆ ಆ ಫಿಗರ್ಸ್

ಅನ್ನು ಆಧಾರವಾಗಿ ಇಟ್ಟುಕೊಂಡೆ ಸೆಂಟ್ರಲ್ ವಾಟರ್ ಕಮಿಷನರ್‌ರವರಿಗೆ ಪ್ರತಿನಿತ್ಯ ಮಾಹಿತಿ ಹೋಗುತ್ತದೆ. ಅವರದೇ ಆದಂಥ ನೆಟ್‌ವರ್ಕ್ ಇದೆ. ಯಾವುದೇ ಮಾಹಿತಿಯನ್ನು ನಾನು ತಪ್ಪು ನೀಡಿಲ್ಲ. ತಾವು ದಯವಿಟ್ಟು ಬರುತ್ತೇವೆಂದು ಹೇಳಿದರೆ ನಾವು ನೀವು ಎಲ್ಲಾ ಬೇಕಾದರೆ ಕೆ.ಆರ್.ಎಸ್‌ಗೆ ಹೋಗಿ ಬರೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ತಾವು ಮಾಹಿತಿಯನ್ನು ನಮ್ಮ ಹತ್ತಿರ ಕೊಟ್ಟಿದ್ದೀರಿ. ಮತ್ತು ತಾವು ಪತ್ರಿಕೆಗಳಿಗೆ ಕೊಟ್ಟಿದ್ದೀರಿ. ಇದರ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ನಾನು ವಿಷಯಕ್ಕೆ ಬರುತ್ತೇನೆ. ನನ್ನದು ಇಷ್ಟೇ ವಿನಂತಿ. ಇವತ್ತು ನಮ್ಮಲ್ಲಿ 5 ಟಿಎಂಸಿ ನೀರನ್ನು ಬಿಡುವಷ್ಟು ಇದೆ ಎಂದರೆ ನಮ್ಮದೇನೂ ಅಭ್ಯಂತರ ಇಲ್ಲ. ಅದಕ್ಕೆ ಚರ್ಚೆ ಮಾಡೋಣ. ಆದರೆ ಈಗ ಇರುವುದೇನೆಂದರೆ ಕುಡಿಯುವುದಕ್ಕೆ ಸರಿಯಾಗಿ ನೀರು ಇಲ್ಲ. ನಾಳೆ ಮಳೆ ಬರದೇ ಇದ್ದರೆ, ಕುಡಿಯುವ ನೀರು ಇಲ್ಲದೇ ಇದ್ದರೆ ನಮ್ಮವರು ಬೀದಿಪಾಲು ಆಗುವಂಥ ಸಂದರ್ಭಕ್ಕೆ ಬಂದು ಬಿಟ್ಟಿದ್ದಾರೆ. ಈ ಮಾಹಿತಿ ಸರಿಯಿಲ್ಲ. ತೂಬು ಕೆಳಗಡೆ ನೀರು ಹೋದ ಮೇಲೆ ನೀರನ್ನು ಎಲ್ಲಿಂದ ಬಿಡುತ್ತೀರಿ? ಲಿಫ್ಟ್ ಮಾಡಿ ಪುನಃ ಕೊಡಬೇಕಾಗುತ್ತದೆ. ಅದು ಒಟ್ಟು 30 ಟಿಎಂಸಿ ನೀರು ಅಲ್ಲ. ನಮಗೆ ಎಷ್ಟು ಬೇಕು, ಎಷ್ಟು ಇದೆ, ಈಗ ಎಷ್ಟು ಕೊಡುವುದಕ್ಕೆ ಸಾಧ್ಯ ಇದೆ ಎನ್ನುವುದು ಬೇಕಾಗಿತ್ತು. ನೀವು ಒಪ್ಪಿಕೊಂಡಿದ್ದೀರಿ. ಈಗ ನಾವು ಚರ್ಚೆ ಮಾಡುವುದಿಲ್ಲ. ಏಕೆಂದರೆ ನಾವು ಪ್ರಶ್ನೋತ್ತರ ವೇಳೆ ನಡೆಸಲು ಒಪ್ಪಿಕೊಳ್ಳುತ್ತಾ ಇದ್ದೇವೆ. ತಾವು ನಮಗೆ ಕಳುಹಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡಿ. ಸರ್ಕಾರದ ಕಡೆಯಿಂದ ವೀಡಿಯೋ ಪ್ರೆಸ್ ರಿಪೋರ್ಟ್‌ಸ್ನ್ನು ಕಳುಹಿಸಿಕೊಡಿ. ಸದನದಲ್ಲಿ ಇದರ ಬಗ್ಗೆ ಚರ್ಚೆ ಆಗುತ್ತಿದ್ದ ಹಾಗೆ ನಾವು ಕೆಲವರು ಹೋಗಿ ಮಧ್ಯಾಹ್ನದ ಒಳಗಡೆ ಬಂದು ಒಂದು ಸರಿಯಾದ ವರದಿಯನ್ನು ಕೊಡುತ್ತೇವೆ. ಇಷ್ಟೇ ನನ್ನ ವಿನಂತಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ನಾವು ಎಲ್ಲಾ ಪಕ್ಷದವರೂ ಸೇರಿ ಈ ಒಂದು ಕಾವೇರಿ ನೀರಿನ ಬಗ್ಗೆ 5 ಟಿ.ಎಂ.ಸಿ. ನೀರನ್ನು ಬಿಟ್ಟದ್ದರ ಬಗ್ಗೆ ಧರಣಿಯನ್ನು ಪ್ರಾರಂಭ ಮಾಡಿದ್ದೆವು. ಆದರೆ ತಾವು ಮಧ್ಯಸ್ಥಿಕೆಯನ್ನು ವಹಿಸಿ ಎಲ್ಲರನ್ನೂ ಕರೆಸಿ ಇದು ಸಾಧ್ಯವಾದಷ್ಟು ಮಟ್ಟಿಗೆ ಸೌಹಾರ್ದಯುತವಾಗಿ ಇತ್ಯರ್ಥ ಆಗಬೇಕು, ಮತ್ತು ಚರ್ಚೆ ಕೂಡ ಇದರ ಮೇಲೆ ಆಗಬೇಕೆಂದು ಹೇಳಿ ತಾವು ಹೇಳಿದ ಮೇಲೆ ನಾವು ಕೂಡ ಒಪ್ಪಿಕೊಂಡು ಸೆಕ್ಷನ್ 159ರ ಕೆಳಗೆ ಸಬ್‌ಸ್ಟಾನ್‌ಟೀವ್ ಮೋಷನ್ ಎಂದು ಹೇಳಿ ಮೂವ್ ಮಾಡಬೇಕು. ಅದಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಕೇಳಿಕೊಂಡಾಗ ತಾವೂ ಕೂಡ ಒಪ್ಪಿದ್ದೀರಿ. ಮತ್ತು ಈ ಸದನದ ಮುಖ್ಯಮಂತ್ರಿಗಳಾದ ಶ್ರೀಮಾನ್ ಜೆ.ಹೆಚ್.ಪಟೇಲರೂ ಕೂಡ ಅದಕ್ಕೆ ಒಪ್ಪಿಕೊಂಡಿದ್ದಾರೆ. ಈ ನಿಯಮದ ಅಡಿಯಲ್ಲಿ ಚರ್ಚೆಗೆ ದಿವಸವಾಗಬಹುದು, ಅರ್ಧ ದಿವಸ ಆಗಬಹುದು ಅದರಲ್ಲಿ ಪ್ರಾವಿಷನ್ ಇದೆ. ಅದರ ಪ್ರಕಾರ ಅವಕಾಶ ಮಾಡಿಕೊಡುವುದಕ್ಕೆ ಕೂಡ ತಮಗೆ ಅಧಿಕಾರ ಇದೆ. ಅದರ

ಪ್ರಕಾರ ಮುಂದೆ ನಾವು ಚರ್ಚೆಗೆ ತೆಗೆದುಕೊಳ್ಳೋಣ ಎನ್ನತಕ್ಕಂಥದ್ದನ್ನು ಹೇಳಿದ ಮೇಲೆ ಈ ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭ ಮಾಡೋಣ ಎಂದು ಇವತ್ತು ನಾವು ನಿರ್ಧಾರಕ್ಕೆ ಬಂದಿದ್ದೇವೆ. ಅದಕ್ಕೆ ಈ ಒಂದು ವಿಷಯವನ್ನು ಇತ್ಯರ್ಥ ಮಾಡಿ ಇತ್ಯರ್ಥ ಅಂದಕೆ ಧರಣಿ ಬಗ್ಗೆ ಒಂದು ಇತ್ಯರ್ಥ ಮಾಡಿ ಮುಂದೆ ಚರ್ಚೆಗೆ ತೆಗೆದುಕೊಂಡು, ಆಮೇಲೆ ಯಾವ ನಿರ್ಣಯ ತೆಗೆದುಕೊಳ್ಳಬೇಕು ಎಂಬುದನ್ನೂ ನೋಡೋಣ. ತಾವು ಚರ್ಚೆಗೆ ಅನುಕೂಲ ಮಾಡಿಕೊಟ್ಟಿದ್ದೀರಿ. ಮತ್ತು ಪ್ರಶ್ನೋತ್ತರ ವೇಳೆಯನ್ನು ನಡೆಸುವುದಕ್ಕೆ ಕೂಡ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸಿ ಈಗ ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಕಾಲವನ್ನು ನಿಲ್ಲಿಸಬೇಕೆಂದು ಹೇಳತಕ್ಕಂಥದ್ದರಲ್ಲಿ ಹಠ ಅಥವಾ ಉದ್ದೇಶ ಅಲ್ಲ. ಪ್ರಶ್ನೋತ್ತರ ಕಾಲ ನಿಂತು ಇದರ ಬಗ್ಗೆ ಚರ್ಚೆಯಾಯಿತು ಎಂದು ಹೇಳಿದರೆ ಅದಕ್ಕೆ ಗಾಂಭೀರ್ಯತೆ ಜಾಸ್ತಿಯಾಗುತ್ತದೆ. ಮತ್ತು ಶಕ್ತಿ ಜಾಸ್ತಿಯಾಗುತ್ತದೆ. ಈ 5 ಟಿಎಂಸಿ ನೀರು ಬಿಟ್ಟಿರುವುದಕ್ಕೆ ಅದರ ಗಾಂಭೀರ್ಯವೇ ಹೊರಟುಹೋಗಿದೆ. ಶಕ್ತಿಯೂ ಹೊರಟು ಹೋಗಿದೆ. ನೀರು ಬಿಟ್ಟಿದ್ದಾರೆ, ನೀರು ಹೋಗುತ್ತಾ ಇದೆ. ಆಮೇಲೆ ಮಾನ್ಯ ನೀರಾವರಿ ಸಚಿವರು ನಮ್ಮಲ್ಲಿ ನೀರು ಬರುತ್ತಾ ಇದೆ. ಅದಕ್ಕೋಸ್ಕರ ನೀರು ಬಿಟ್ಟಿದ್ದೇವೆಂದು ಹೇಳಿದ್ದಾರೆ. ಮತ್ತು ನಮ್ಮ ವಿರೋಧ ಪಕ್ಷದ ನಾಯಕರು ಅಲ್ಲಿಗೆ ಹೋಗಿ ನಾವೆಲ್ಲಾ ನೋಡಿಕೊಂಡು ಬರೋಣ, ಬಂದ ಮೇಲೆ ಚರ್ಚೆ ಮಾಡೋಣವೆಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಹಾಗೆ ಹೇಳಲಿಲ್ಲ. ನಾನು ಹೇಳಿದ್ದುದು ಏನೆಂದರೆ ಇಲ್ಲಿ ಚರ್ಚೆ ಮಾಡುತ್ತಾ ಇರಿ. ಅವರು ಯಾರ್ಯಾರೂ ಹೋಗುತ್ತಾರೋ ಅವರ ಜೊತೆಯಲ್ಲಿ ನಾವು ಹೋಗಿ ನೋಡಿಕೊಂಡು ಬರುತ್ತೇನೆ. ಕೆ.ಆರ್.ಎಸ್.ನಲ್ಲಿ ಇರತಕ್ಕ ನೀರಿನಲ್ಲಿ ನಾವು ಮೈಸೂರು, ಮಂಡ್ಯಾಕ್ಕೆ ಕುಡಿಯುವ ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲದೇ ಇರುವಂಥ ಪರಿಸ್ಥಿತಿ ಇದೆ. ಕೊನೆಯ ಎರಡು ತೂಬಿನಲ್ಲಿ ನೀರು ಬಿಡುತ್ತಿರುವುದು ಕನ್ನಡಪ್ರಭದಲ್ಲಿ ಬಂದಿದೆ. ನಿನ್ನೆ ಎಷ್ಟು ಇತ್ತು ಎಂದು ವರದಿಯಲ್ಲಿ ಬಂದಿದೆ. ನನ್ನ ಉದ್ದೇಶ ಇಷ್ಟೆ. ನೀರು ಇಲ್ಲದೆಯೇ ದೇಶದ ಜನಕ್ಕೆ ನೀರು ಇದೆಯೆಂದು ಹೇಳುವಂಥದ್ದು ಅಗಬಾರದು ಇದರಿಂದ ಮುಂದಕ್ಕೆ ಈ ಸರ್ಕಾರಕ್ಕೆ ಕಷ್ಟ ಆಗಬಹುದು. ಆ ಇಕ್ಕಟ್ಟನ್ನು ಬಗೆಹರಿಸುವುದಕ್ಕೆ ಹೋಗಿಬರುತ್ತೇನೆ. ನಿಮಗೆ ಒಂದು ವರದಿಯನ್ನು ಕೊಡುತ್ತೇವೆ. ನಿಮ್ಮ ಸರ್ಕಾರದ ಪ್ರತಿನಿಧಿಗಳನ್ನು ಕಳುಹಿಸಿಕೊಡಿ.

ಶ್ರೀ ಪಾಟಾಳ್ ನಾಗರಾಜ್:- ತಾವು ಸ್ವಲ್ಪ ನಾನು ಹೇಳುವುದನ್ನು ತಾಳ್ಮೆಯಿಂದ ಕೇಳಬೇಕು. ನಾನು ಏನು ಹೇಳುತ್ತಿದ್ದೇನೆಂದರೆ ಚರ್ಚೆ ಮಾಡುವಾಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರೂ ಸಹ ಪ್ರಮುಖವಾಗಿ ಭಾಗವಹಿಸಬೇಕು ಎಂಬುದು ನನ್ನ ಉದ್ದೇಶ. ವಿರೋಧ ಪಕ್ಷದ ಸದಸ್ಯರುಗಳೆಲ್ಲರೂ ಸದನದಿಂದ ಹೊರಗಡೆ ಇದ್ದು ಆಮೇಲೆ ಬಂದು ಚರ್ಚೆ ಮಾಡುತ್ತೀರಿ ಆಮೇಲೆ ನಾನು ಬರುತ್ತೇನೆಂದು ಹೇಳುತ್ತಾರಲ್ಲಾ ಅದು ಒಂದು. ಈಗ ಹಿಂದೆ ಸರ್ಕಾರ 5 ಟಿಎಂಸಿ

ನೀರನ್ನು ತಮಿಳುನಾಡಿಗೆ ಬಿಟ್ಟಾಗ ನಡೆದಂತಹ ಗೊಂದಲವೆಲ್ಲಾ ತಮಗೆ ಗೊತ್ತಿದೆ. ಅದು ಅಲ್ಲದೇ 6 ಟಿಎಂಸಿ ನೀರನ್ನು ಹಿಂದೆ ಬಿಟ್ಟಾಗ ನಡೆದಂಥ ಗೊಂದಲವು ಸಹ ಗೊತ್ತಿದೆ. ತಮ್ಮಲ್ಲಿ ನಾನು ಹೇಳುವುದು ಏನೆಂದರೆ, ಪ್ರಶ್ನೆಯನ್ನು ಕಳುಹಿಸಿರತಕ್ಕಂತಹ ಸದಸ್ಯರ ಹಕ್ಕನ್ನು ಕಡಿಮೆ ಮಾಡಬೇಕು ಎಂಬ ಉದ್ದೇಶವಿಲ್ಲ. ಅವರ ಹಕ್ಕಿಗಿಂತಲೂ ಪ್ರಶ್ನೋತ್ತರಕ್ಕಿಂತಲೂ ಈ ಕಾವೇರಿ ನೀರಿನ ವಿಷಯ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿರತಕ್ಕಂಥದ್ದು. ಇದು ನನ್ನ ವೈಯಕ್ತಿಕವಾದಂತಹ ಅಭಿಪ್ರಾಯವಾಗಿದೆ, ತಾವು ಏನು ಬೇಕಾದರೂ ತೀರ್ಪನ್ನು ಕೊಡಬಹುದು. ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಕಾವೇರಿ ನೀರಿಗೆ ಸಂಬಂಧವಾದಂತಹ ವಿಷಯದ ಬಗ್ಗೆ ನೇರವಾಗಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನನ್ನ ವಾದ. ನನ್ನ ವೈಯಕ್ತಿಕವಾದಂತಹ ಅಭಿಪ್ರಾಯ ಏನೆಂದರೆ ಇದು ಜೀವನ ಮರಣದ ಪ್ರಶ್ನೆ. ಕರ್ನಾಟಕಕ್ಕೆ ಬೆಂಕಿ ಬಿದ್ದಿದೆ. ಕನ್ನಡ ಜನ ಸಾಯುತ್ತಿದ್ದಾರೆ, ಇದನ್ನು ಬಿಟ್ಟು ಇನ್ನು ಯಾವುದನ್ನು ಚರ್ಚೆ ಮಾಡೋಣ ಸ್ವಾಮಿ? ಮಾನ್ಯ ಸದಸ್ಯರು 25 ಪ್ರಶ್ನೆಗಳನ್ನು ತಮ್ಮ ಊರಿಗೆ ರಸ್ತೆ, ನೀರು ಇದರ ಬಗ್ಗೆ ಸರ್ಕಾರವನ್ನು ಆಮೇಲೆ ಕೇಳಿಕೊಳ್ಳಬಹುದು. ಕಾವೇರಿಯ ನೀರಿನ ಪ್ರಶ್ನೆಯು ಅತಿ ಮುಖ್ಯವಾದುದು. ತಾವು ಏನು ಬೇಕಾದರೂ ತೀರ್ಮಾನವನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು:- ಈಗ ಪ್ರಶ್ನೋತ್ತರ ವೇಳೆ.

ಶ್ರೀ ವಾಟಾಳ್ ನಾಗರಾಜ್:- ನನ್ನ ಹೂತಿಗೆ ನಿಮ್ಮಲ್ಲಿ ಏನು ಇಲ್ಲವೇ? ತಾವು ಪ್ರಶ್ನೆಯನ್ನು ಕೇಳಿದ್ದುದು ಒಂದೇ ಉತ್ತರವಾದರೆ ನನ್ನದು ಏನೂ ಅಭ್ಯಂತರ ಇಲ್ಲ.

ಅಧ್ಯಕ್ಷರು:- ಅಲ್ಲ, ನಿನ್ನೆ ನಾವು ಎಲ್ಲಾ ವಿರೋಧ ಪಕ್ಷದ ಸದಸ್ಯರುಗಳನ್ನು ಕರೆದು ಚರ್ಚೆ ಮಾಡಿದ್ದೇವೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಅದೇ ಉತ್ತರ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ ಅದೇ ಉತ್ತರವೆಂದು ಹೇಳುತ್ತಾರೆ. ಆದರೆ ಮಾನ್ಯ ಎಂ.ಪಿ.ಪ್ರಕಾಶ್‌ರವರು ವಿರೋಧ ಪಕ್ಷದ ಕಡೆಯಲ್ಲಿ ಕುಳಿತುಕೊಂಡಿದ್ದರೆ, ಅವರಿಗೆ ಅರ್ಥವಾಗುತ್ತಿತ್ತು. ಮಾನ್ಯ ಪ್ರಕಾಶ್‌ರವರು ಈ ರೀತಿಯಾಗಿ ಹೇಳುತ್ತಾರೆಂದು ನಾನು ಅಂದುಕೊಂಡಿರಲಿಲ್ಲ. ಪ್ರಕಾಶ್‌ರ ಧಾಟಿಯಲ್ಲಿ ಅಥವಾ ಇನ್ನೊಬ್ಬ ಸದಸ್ಯರ ಧಾಟಿಯಲ್ಲಿ ಮಾನ್ಯ ಅಧ್ಯಕ್ಷರು ಮಾತನಾಡುತ್ತಾರೆಂದು ನಾನು ಎಂದೂ ನಿರೀಕ್ಷೆಯನ್ನು ಮಾಡಿಲ್ಲ. ಆದುದರಿಂದ ಈ ಸದನದ ಬಗ್ಗೆ ತಮಗೆ ಅಪಾರವಾದಂತಹ ಗೌರವ ಇದೆ ಎಂದು ನಾನು ಅಂದುಕೊಂಡಿದ್ದೇನೆ. ಆದರೆ ನಾನು ಮನವಿಯನ್ನು ಮಾಡಿದ ಮೇಲೆ ಅಧ್ಯಕ್ಷರು ಏನಾದರೂ ಒಂದು ಹೇಳಬೇಕಲ್ಲಾ? ಆ ಕಡೆಯ ಬಗ್ಗೆ ಗಮನವನ್ನು ಕೊಡದೇ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಂಡರೆ ನನ್ನ ಹಣೆಬರಹ ಏನು?

ಅಧಕ್ಷರು:- ಮಾನ್ಯ ಶ್ರೀ ಎಂ.ಪಿ.ಪ್ರಕಾಶ್‌ರವರು ಅಧ್ಯಕ್ಷ ಸ್ಥಾನವನ್ನು

ಅಲಂಕರಿಸುವುದಕ್ಕೆ ನನಗಿಂತಲೂ ಹೆಚ್ಚು ಯೋಗ್ಯರು ಎನ್ನತಕ್ಕಂತಹ ನಂಬಿಕೆ ನನಗಿದೆ.

ಶ್ರೀ ವಾಟಾಳ್ ನಾಗರಾಜ್:- ನಾನು ಅಲ್ಲಿ ಯೋಗ್ಯತೆ ಪ್ರಶ್ನೆಯನ್ನು ಪ್ರಸ್ತಾಪಿಸಲಿಲ್ಲ. ಮಾನ್ಯ ಪ್ರಕಾಶ್‌ರವರು ಮಂತ್ರಿಗಳಾಗಿಯೇ ಮಾತನಾಡುತ್ತಿದ್ದಾರೆ. ಆದುದರಿಂದ ಅಷ್ಟೆ, ಆದರೆ ನನಗೆ ಯಾವ ಭಾವನೆಯೂ ಇಲ್ಲ.

ಅಧ್ಯಕ್ಷರು:- ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಮತ್ತು ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ತಾವು ಎಲ್ಲಾರನ್ನು ಕರೆಸಿದಾಗ ಒಂದು ತೀರ್ಮಾನಕ್ಕೆ ನಾವುಗಳು ಬಂದೆವು. ನನ್ನ ಅಭಿಪ್ರಾಯ ಏನೆಂದರೆ ಈ ಸದನದಲ್ಲಿ ಆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ. ಆದರೆ ಒಂದು ಗಂಟೆ ಹೆಚ್ಚು ಕಡಿಮೆಯಾದರೆ ಅನಾಹುತವಾಗುವುದಿಲ್ಲ, ಇತರ ಸದಸ್ಯರಿಗೂ ಕೂಡ ಸದನದ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಕ್ಕೆ ಒಂದು ಅವಕಾಶವನ್ನು ಕೊಡಬೇಕು ಮತ್ತು ಈಗಾಗಲೇ ಮಾನ್ಯ ಸದಸ್ಯರುಗಳು ಕೇಳಿರತಕ್ಕಂತಹ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ತರಿಸಲು ಸಾಕಷ್ಟು ಹಣವನ್ನು ಸರ್ಕಾರದಿಂದ ಖರ್ಚುಮಾಡಿದ್ದೇವೆ. ಆದುದರಿಂದ ಕಾರ್ಯಕ್ರಮದಲ್ಲಿ ಮೊದಲು ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಂಡು ನಂತರ ಕಾವೇರಿಯ ನೀರಿನ ವಿಷಯವಾಗಿ ಮಾತನಾಡೋಣವೆಂದು ರೂಪಿಸಿಕೊಂಡಿದ್ದೇವೆ. ಅದು ಬಹಳ ಪ್ರಾಮುಖ್ಯವಾದಂತಹ ವಿಚಾರ ಅಲ್ಲ ಎಂದು ನಾನು ಹೇಳುವುದೇ ಇಲ್ಲ. ಯಾವುದೇ ಒಬ್ಬ ಕನ್ನಡ ಪ್ರಜೆ, ಕರ್ನಾಟಕಕ್ಕೆ ಸೇರಿದಂಥವರು ಕಾವೇರಿ ವಿಷಯವನ್ನು ಪ್ರಮುಖವಲ್ಲ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ತಾವು ದಯಮಾಡಿ ಸಹಕರಿಸಿ.

ಶ್ರೀ ವಾಟಾಳ್ ನಾಗರಾಜ್:- ಬಿಜೆಪಿ ಪಕ್ಷದವರು ಮತ್ತು ಕಾಂಗ್ರೆಸ್ ಪಕ್ಷದವರು ಇದಕ್ಕೆ ಒಪ್ಪಿಕೊಂಡಿರುವುದು ನನಗೆ ಗೊತ್ತಿಲ್ಲ.

ಅಧ್ಯಕ್ಷರು:- ನನ್ನ ಕೊಠಡಿಗೆ ಬಂದು ತಾವುಗಳೆಲ್ಲರೂ ಒಪ್ಪಿಕೊಳ್ಳಲಿಲ್ಲ ಎಂದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್:- ನನಗೆ ಗೊತ್ತಿಲ್ಲ. ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಎಂದು ಪ್ರಮಾಣವಾಗಿ ಎಂದೂ ಸಹ ನಾನು ಹೇಳಿಲ್ಲ. ಆದರೆ ಈಗ ಹೇಳುತ್ತಿದ್ದೇನೆ. ಪ್ರಶ್ನೋತ್ತರ ವೇಳೆಯನ್ನು ನಿಲ್ಲಿಸಿ ಕಾವೇರಿ ನೀರಿನ ಚರ್ಚೆಯನ್ನು ತೆಗೆದುಕೊಳ್ಳಿ ಎಂದು. ನಾನು ತೆರೆಯಲ್ಲಿಯೂ ಒಪ್ಪಿಲ್ಲ, ಎಲ್ಲಿಯೂ ಒಪ್ಪಿಲ್ಲ.

ಅಧ್ಯಕ್ಷರು:- ಈಗ ತಾವು ನನ್ನ ಮಾತಿಗೆ ಬೆಲೆಯನ್ನು ಕೊಡುತ್ತೀರಿ ಹಾಗೂ ನನ್ನೊಡನೆ ಸಹಕರಿಸುತ್ತೀರಿ ಅನ್ನತಕ್ಕಂತಹ ವಿಶ್ವಾಸವಿಟ್ಟುಕೊಂಡಿದ್ದೇನೆ. ಈಗ ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆಗಳನ್ನು ತೆಗೆದುಕೊಂಡು ನಂತರ ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡೋಣ.

ಶ್ರೀ ವಾಟಾಳ್ ನಾಗರಾಜ್:- ಈ ವಿಶ್ವಾಸ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾನು ಹೇಳುತ್ತೇನೆ ನನ್ನ ಮಾತಿಗೆ ಏನು ಸ್ಯಾಂಕ್ಷನ್ ಇಲ್ಲವೇ ಎಂದು; ಎಲ್ಲರೂ ಇದೇ ಮಾತನ್ನು ಹೇಳಿದರೆ ಅವರವರ ಪಾಡಿಗೆ ನಮ್ಮ ನಮ್ಮದನ್ನು ಹೇಳಿಕೊಳ್ಳೋಣ. ಅದೇ ರೀತಿಯಾಗಿ ನಡೆಯಲಿ. ಸಬ್‌ಸ್ಟಾನ್‌ಟೀವ್ ಮೋಷನ್ನನ್ನು ಅವರೂ ಸಹ ಕೊಟ್ಟಿದ್ದಾರೆ. ನಾವೂ ಸಹ ಕೊಟ್ಟಿದ್ದೇವೆ. ಸಬ್‌ಸ್ಟಾನ್‌ಟೀವ್ ಮೋಷನ್ ಪೆಂಡಿಂಗ್ ಇರುವಾಗ ನಾವು ಕೊಟ್ಟಿಲ್ಲವೆಂದು ಹೇಳಿದರೆ ಹೇಗೆ? ನಿಯಮ 159ರ ಅಡಿಯಲ್ಲಿ ಮೂವ್ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ನಮ್ಮದು ಏನೂ ಇಲ್ಲ. ನಾನು ಏನೂ ತಲೆಯನ್ನು ಕೆಡಿಸಿಕೊಂಡಿಲ್ಲ, ಅವರವರ ಅನಿಸಿಕೆಗಳನ್ನು ಸದನದಲ್ಲಿ ಹೇಳಬಹುದು. ನಾವು ಏನು ಒಟ್ಟಿಗೆ ಹೇಳುತ್ತಿದ್ದೇವೆಯೇ? ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ, ನಿಮ್ಮ ಅನಿಸಿಕೆಯನ್ನು ಎಷ್ಟು ಸಾರಿ ಬೇಕಾದರೂ ಹೇಳಬಹುದು. ನಿಮಗೂ ಅಧಿಕಾರವಿದೆ, ಶ್ರೀ ಯಡಿಯೂರಪ್ಪನವರಿಗೂ ಅಧಿಕಾರ ಇದೆ. ಅದೇ ರೀತಿಯಲ್ಲಿ ನನಗೆ ಮಾತನಾಡುವುದಕ್ಕೆ ಅಧಿಕಾರ ಇಲ್ಲವೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈ ಸದನದಲ್ಲಿ ಎಲ್ಲಾರಿಗೂ ಮಾತನಾಡುವ ಹಕ್ಕು ಇದೆ. ಆದರೆ ಎಲ್ಲಾ ಹಕ್ಕನ್ನು ಒಬ್ಬರೇ ಉಪಯೋಗಿಸಿಕೊಳ್ಳಲು ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಹಕ್ಕು ಇದೆ. ಎಲ್ಲರ ಹಕ್ಕುಗಳನ್ನು ನಾನೇ ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲ ನನಗೂ ಗೊತ್ತಿದೆ. ಆ ರೀತಿಯಾಗಿ ನಾನು ಹೇಳಲೇ ಇಲ್ಲ.

ಅಧ್ಯಕ್ಷರು:- ಈಗ ಕಾವೇರಿಯ ವಿಷಯದಲ್ಲಿ ಮತ್ತು ಗಂಭೀರವಾದಂತಹ ವಿಷಯಗಳು ಚರ್ಚೆಗೆ ಬಂದಾಗ ನಾವೆಲ್ಲರೂ ಒಗ್ಗಟ್ಟಿನಿಂದ ಇರಬೇಕು. ನೀವು ಈ ರೀತಿಯಾಗಿ ನಿಮ್ಮ ನಿಮ್ಮಲ್ಲಿಯೇ ಜಗಳವನ್ನು ಮಾಡಿಕೊಂಡರೆ ನಮ್ಮ ವಾದ ಸ್ವಲ್ಪ ಸಡಿಲವಾಗುತ್ತದೆ. ದಯಮಾಡಿ ಸಹಕಾರ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್:- ನಿಮ್ಮ ಮಾತಿಗೆ ನನ್ನದು ಏನೂ ತಕರಾರು ಇಲ್ಲ. ಆದರೆ ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶವನ್ನು ಕೊಡಿ. ಅದು ಏನೆಂದರೆ ನನ್ನ ಅಭಿಪ್ರಾಯ ಈ ಪ್ರಶ್ನೋತ್ತರ ವೇಳೆಯನ್ನು ನಿಲ್ಲಿಸಿ, ಕಾವೇರಿಯ ಬಗ್ಗೆ ಚರ್ಚೆಯನ್ನು ಮಾಡಿ ಎನ್ನತಕ್ಕಂಥದ್ದು. ತಾವು ನಡೆಸಿ ನಿಮ್ಮ ತೀರ್ಪಿನ ವಿರುದ್ಧವಾಗಿ ಸಭಾತ್ಯಾಗವನ್ನು ಮಾಡುವುದಿಲ್ಲ. ಇದಕ್ಕೆ ಪ್ರಾಮುಖ್ಯತೆ ಸಿಗಲಿಲ್ಲವೆಂದು ಅಂದುಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು).

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ:- ವೈದ್ಯಕೀಯ ಶಿಕ್ಷಣಕ್ಕೆ ಜಿಲ್ಲಾವಾರು ಹಾಗೂ ಜನಸಂಖ್ಯಾವಾರು ಆಧರಿಸಿ ಮೆರಿಟ್‌ಲಿಸ್ಟ್ ತಯಾರಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 46 (454)

ಶ್ರೀ ಡಿ.ಆರ್.ಪಾಟೀಲ್ (ಗದಗ):- ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕಳೆದ ಶೈಕ್ಷಣಿಕ ವರ್ಷದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಆಯ್ಕೆಯಾದ ಮೆರಿಟ್ ಲಿಸ್ಟ್‌ನಲ್ಲಿದ್ದ ವಿದ್ಯಾರ್ಥಿಗಳು ಯಾವ ಯಾವ ಜಿಲ್ಲೆಗಳಿಗೆ ಸೇರಿದವರಾಗಿದ್ದರು.

ಆ) ಈಗಿರುವ ವ್ಯವಸ್ಥೆಯಲ್ಲಿ ಜಿಲ್ಲಾವಾರು ಆಗುವ ತಾರತಮ್ಯವನ್ನು ಹೋಗಲಾಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು.

ಇ) ಜಿಲ್ಲಾವಾರು ಹಾಗೂ ಜನಸಂಖ್ಯಾವಾರು: ಆಧರಿಸಿ ಮೆರಿಟ್ ಲಿಸ್ಟ್ ತಯಾರಿಸಿ ತಾರತಮ್ಯವನ್ನು ಹೋಗಲಾಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು):-

ಅ) ಜಿಲ್ಲಾವಾರು ವಿವರ ಲಗತ್ತಿಸಿದೆ.

ಆ) ನಿಯಮಾನುಸಾರ ಪ್ರತಿಭೆಯ ಆಧಾರದ ಮೇಲೆ ಆಯ್ಕೆ ಮಾಡುತ್ತಿರುವುದರಿಂದ ಜಿಲ್ಲಾವಾರು ತಾರತಮ್ಯವನ್ನು ಹೋಗಲಾಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

Annexure to Question No.454

District wise report indicating the No. of students who have been allotted Medical and Dental Seats during the year 1995.

Dist. Name	Allotted Medical + Dental Seats
Bangalore Rural	100
Bangalore Urban	781
Belgaum	118
Bellary	141
Bidar	40
Bijapur	111

Chickmagalore	51
Chitradurga	148
Dakshina Kannada	248
Dharwad	160
Gulbarga	105
Hassan	59
Kodagu	25
Kolar	177
Mandya	78
Mysore	153
Raichur	69
Shimoga	129
Tumkur	178
Uttara Kannada	58.

Report indicating the total number of students who have been allotted Medical seats during the year 1995.

District Name	Allotted Medical
Bangalore Rural	77
Bangalore Urban	508
Belgaum	71
Bellary	95
Bidar	27
Bijapur	77
Chickmagalore	41

Chitradurga	107
D.K.District	154
Dharwad	91
Gulbarga	77
Hassan	36
Kodagu	12
Kolar	109
Mandya	52
Mysore	102
Raichur	52
Shimoga	87
Tumkur	131
Uttara Kannada	37

ಶ್ರೀ ಡಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಕಳೆದ ವರ್ಷ ವೈದ್ಯಕೀಯ ಮತ್ತು ದಂತ ವೈದ್ಯ ಶಿಕ್ಷಣದಲ್ಲಿ ಅದರಲ್ಲಿಯೂ ಮೆರಿಟ್ ಸೀಟ್ ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್‌ಗೆ 781, ರಾಯಚೂರು ಡಿಸ್ಟ್ರಿಕ್ಟ್‌ಗೆ 69, ಬಿಜಾಪುರ ಡಿಸ್ಟ್ರಿಕ್ಟ್‌ಗೆ 111, ಗುಲ್ಬರ್ಗಕ್ಕೆ 106, ಅಂದರೆ ಬೆಂಗಳೂರಿನಿಂದ ಯಾವ್ಯಾವ ಪ್ರದೇಶಗಳು ಎಷ್ಟೆಷ್ಟು ದೂರ ಇದೆ ಅಷ್ಟು ಕಡಿಮೆಯ ಸೀಟ್‌ಗಳು ವೈದ್ಯಕೀಯ ಶಿಕ್ಷಣಕ್ಕೆ ಮತ್ತು ದಂತವೈದ್ಯ ಶಿಕ್ಷಣಕ್ಕೆ ಈಗ ಇರುವ ವ್ಯವಸ್ಥೆಯಲ್ಲಿ ಸಿಕ್ಕಿದೆ. ಆದ್ದರಿಂದ ಜಿಲ್ಲಾವಾರು ಈಗ ಏನು ತಾರತಮ್ಯವಾಗುತ್ತದೆ ಇದನ್ನು ಬದಲು ಮಾಡುವುದಕ್ಕೋಸ್ಕರವಾಗಿ, ವಿಶ್ವವಿದ್ಯಾನಿಲಯದ ಕಾರ್ಯ ಕ್ಷೇತ್ರವಾರುವಾಗಲಿ, ಅಥವಾ ಕಂದಾಯ ವಿಭಾಗವಾರು ಮೆರಿಟ್ ಸೀಟ್ ಆಯ್ಕೆಯಾಗುವಂತೆ ಸರ್ಕಾರ ವ್ಯವಸ್ಥೆಯನ್ನು ಮಾಡುತ್ತದೆಯೇ? ನಾನು ಹೇಳಿದಂತೆ ನಮ್ಮ ನೆರೆಯ ರಾಜ್ಯದಲ್ಲಿ ಈ ಪದ್ಧತಿಯು ಜಾರಿಯಲ್ಲಿರುತ್ತದೆ. ಬೆಂಗಳೂರಿನಲ್ಲಿ ಶಿಕ್ಷಣ ಪರಿಸರವನ್ನು ಹೊಂದಿರುವಂತಹ ವಿದ್ಯಾಭ್ಯಾಸವನ್ನು ಮಾಡುವಂತಹ ವಿದ್ಯಾರ್ಥಿಗಳ ಜೊತೆಗೆ ಬೇರೆ ಜಿಲ್ಲೆಯ ವಿದ್ಯಾರ್ಥಿಗಳು ಪೈಪೋಟಿಯನ್ನು ಮಾಡುವಂಥದ್ದು ಸರಿಯೇ? ಇವೆರಡು ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಸಂಬಂಧಪಟ್ಟಂಥ ಮಂತ್ರಿಗಳಿಂದ ನಿರೀಕ್ಷೆ ಮಾಡುತ್ತೇನೆ.

ಡಾ.ಎಂ.ಶಂಕರ್ ನಾಯಕ್:- ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ಆಯ್ಕೆಯನ್ನು

ಮಾಡುವಾಗ ಮೆರಿಟ್ ಮೇಲೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕೆಂದು ನಿಯಮ ಇರುವುದರಿಂದ ಜಿಲ್ಲಾವಾರು ಮಾಡಬೇಕೆಂದು ನಿಯಮವು ಇಲ್ಲದೇ ಇರುವುದರಿಂದ ಇದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು:- ನಿಮ್ಮ ಅನುಕೂಲಕ್ಕೆ ಬೇಕಾದರೆ ಮಾನ್ಯ ಸದಸ್ಯರಲ್ಲಿ ಮತ್ತೆ ಅದೇ ಪ್ರಶ್ನೆಯನ್ನು ಕೇಳುವುದಕ್ಕೆ ಹೇಳುತ್ತೇನೆ. ನೀವು ಉತ್ತರವನ್ನು ಪ್ರಾರಂಭ ಮಾಡಿದಾಗಲೇ ನನಗೆ ಗೊತ್ತಾಯಿತು, ನೀವು ತಪ್ಪಾಗಿ ಅರ್ಥ ಮಾಡಿಕೊಂಡಿದ್ದೀರಿ ಎಂದು.

ಡಾ.ಎಂ.ಶಂಕರ್‌ನಾಯಕ್:- ಮಾನ್ಯ ಸದಸ್ಯರು ಹೇಳುವುದು ವೈದ್ಯಕೀಯ ಮತ್ತು ದಂತ ವೈದ್ಯಕೀಯ ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಬೆಂಗಳೂರಿನ ಅರ್ಬನ್ ಡಿಸ್ಟ್ರಿಕ್ಟ್‌ಗಳಲ್ಲಿ ಹೆಚ್ಚು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆಂದು. ಆದರೆ ಈ ಆಯ್ಕೆಯನ್ನು ಮೆರಿಟ್ ಮೇಲೆ ಮಾಡುತ್ತೇವೆಯೇ ಹೊರತು, ಜಿಲ್ಲಾವಾರು ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು:- ಮೆರಿಟ್ ಮೇಲೆ ಎಲ್ಲಾ ವ್ಯವಸ್ಥೆಯನ್ನು ಮಾಡುತ್ತೀರಿ, ಆದರೆ ಬೆಂಗಳೂರಿನಲ್ಲಿ ಓದುವಂತಹ ವಿದ್ಯಾರ್ಥಿಗಳಿಗೆ ಇರುವ ವ್ಯವಸ್ಥೆಯು ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಇದೆಯೇ?

ಡಾ.ಎಂ.ಶಂಕರನಾಯಕ್:- ಮಾನ್ಯ ಅಧ್ಯಕ್ಷರೆ, ನಿಯಮ ಇರುವುದು ಮೆರಿಟ್‌ನಲ್ಲಿಯೇ ತೆಗೆದುಕೊಳ್ಳಬೇಕೆಂದು.

ಅಧ್ಯಕ್ಷರು:- ಅದಕ್ಕೆ ನಿಯಮವನ್ನು ಬದಲಾಯಿಸುತ್ತೀರಾ ಎಂದು ಅವರು ಕೇಳುತ್ತಿರುವುದು. ಅದರ ಮೇಲೆ ಮಾತನಾಡಿ.

ಡಾ.ಎಂ.ಶಂಕರನಾಯಕ್:- ಸದ್ಯಕ್ಕೆ ನಿಯಮವನ್ನು ಬದಲಾಯಿಸುವುದು ಇಲ್ಲ. ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ - ರಾಜ್ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಈ ರೀತಿಯ ಪ್ರಾದೇಶಿಕ ಅಸಮಾನತೆಗಳು ಕೆಲವು ಐತಿಹಾಸಿಕ ಮತ್ತು ಸಾಮಾಜಿಕ ಕಾರಣಗಳಿಂದ ಆಗುತ್ತವೆಂದು ಹೇಳಿ ಹಿಂದೆ ನಮ್ಮ ಜನತಾ ದಳದ ಸರ್ಕಾರ ಇದ್ದಾಗ ಶ್ರೀಮಾನ್ ಕಡಪಟ್ಟಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದೆವು. ಕಡಪಟ್ಟಿಯವರ ಸಮಿತಿಯು ಇಂತಹ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಆಯಾಯ ವಿಶ್ವವಿದ್ಯಾನಿಲಯ ಕ್ಷೇತ್ರ ಅಥವಾ ಆಯಾಯ ಕಂದಾಯ ವಿಭಾಗ ಕ್ಷೇತ ಅಥವಾ ಜಿಲ್ಲಾವಾರು ವಿಭಾಗವಾಗಿ ತೆಗೆದುಕೊಂಡು ಅಲ್ಲಿ ಆಗತಕ್ಕಂತಹ ನ್ಯೂನತೆಗಳನ್ನು ಸರಿಪಡಿಸಲಿಕ್ಕೆ ಪ್ರಯತ್ನವನ್ನು ಮಾಡಿತ್ತು. ಬಹಳ ಯೋಗ್ಯವಾದಂತಹ ಸಲಹೆಯನ್ನು ಮಾನ್ಯ ಶ್ರೀ ಡಿ.ಆರ್.ಪಾಟೀಲ್‌ರವರು ಕೊಟ್ಟಿದ್ದಾರೆ. ಆದುದರಿಂದ ಅದನ್ನು ಬಹಳ ಗಂಭೀರವಾಗಿ ಪರಿಶೀಲಿಸುತ್ತೇವೆ.

ಡಾ.ಎಂ.ಶಂಕರ್ ನಾಯಕ್:- ಮಾನ್ಯ ಸದಸ್ಯರು ಕೊಟ್ಟಿರತಕ್ಕಂತಹ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು:- ಮಾನ್ಯ ಶ್ರೀ ಡಿ.ಆರ್.ಪಾಟೀಲ್‌ರವರೇ, ನಿಮ್ಮ ಪ್ರಶ್ನೆಯನ್ನು ಸರ್ಕಾರ ಪರಿಶೀಲಿಸುತ್ತದೆ.

ಶ್ರೀ ಡಿ.ಆರ್.ಪಾಟೀಲ್:- ಈ ವರ್ಷ ವೈದ್ಯಕೀಯ ಶಿಕ್ಷಣಕ್ಕೆ ಮತ್ತು ದಂತ ವೈದ್ಯಕೀಯ ಶಿಕ್ಷಣಕ್ಕೆ ವಿದ್ಯಾರ್ಥಿಗಳನ್ನು ಮೆರಿಟ್ ಮೇಲೆ ಆಯ್ಕೆಯಾಗುವಾಗಲೇ ಈ ನಿರ್ಣಯವನ್ನು ಗಣನೆಗೆ ತೆಗೆದುಕೊಳ್ಳುತ್ತೀರೋ?

ಅಧ್ಯಕ್ಷರು:- ಅದು ಈಗ ಸಾಧ್ಯವಾಗುವುದಿಲ್ಲ.

ಡಾ.ಎಂ.ಶಂಕರನಾಯಕ್:- ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆ ಎಲ್ಲಾ ನಡೆದಿರುವುದರಿಂದ ಈ ವರ್ಷ ಇದನ್ನು ಮಾಡುವುದಕ್ಕೆ ಬರುವುದಿಲ್ಲ. ಮುಂದಿನ ವರ್ಷದಿಂದ ಜಾರಿಗೆ ತರುತ್ತೇವೆ.

ಅಧ್ಯಕ್ಷರು:- 1997-98ನೇ ಇಸವಿಯಲ್ಲಿಯಾದರೂ ಮಾಡಲಿ ಬಿಡಿ.

ಶ್ರೀ ಎ.ರಾಮದಾಸ್:- ಸನ್ಮಾನ್ಯ ಅಧ್ಯಕ್ಷರೆ, ಮೆರಿಟ್‌ನ ಆಧಾರದ ಮೇಲೆ ಆಲ್ ಇಂಡಿಯಾ ಸೆಲೆಕ್ಷನ್ ಮತ್ತು ಸ್ಟೇಟ್ ಲೆವಲ್ ಸೆಲೆಕ್ಷನ್‌ನಲ್ಲಿರುವ ರೂಲ್‌ಸ ಪ್ರಕಾರದಲ್ಲಿ ಆಯಾಯ ಜಿಲ್ಲೆಗಳಿಗೆ ಪ್ರಾವಿಷನ್ ಮಾಡುವುದಕ್ಕೆ ಕಷ್ಟ ಇದೆ ಎನ್ನುವ ವಿಚಾರ ಇರುವುದರಿಂದಲೇ ಆಯಾಯ ಜಿಲ್ಲೆಗಳಿಗೆ ಸಂಬಂಧಪಟ್ಟ ಹಾಗೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ಹೇಳಿ ಯಾವ ಪೇಮೆಂಟ್ ಸೀಟನ್ನು ಕೊಟ್ಟಿತ್ತೋ ಆ ಪೇಮೆಂಟ್ ಸೀಟನ್ನು ಆ ಪ್ರಾತಿನಿಧ್ಯಕ್ಕೆ ಕೊಡಬೇಕೆಂದು ಮಾಡಿತ್ತು. ಅದನ್ನೂ ಸಹ ಮಾಡುತ್ತಿಲ್ಲ.

ಅಧ್ಯಕ್ಷರು:- ನೀವು ಕೇಳುತ್ತಿರುವ ಪ್ರಶ್ನೆಯು ಇಲ್ಲಿ ಕೇಳಿರುವ ಪ್ರಶ್ನೆಗೂ ಸಂಬಂಧವಿಲ್ಲ. ನೀವು ಕೇಳುತ್ತಿರುವುದು ನೀತಿಗೆ ಸಂಬಂಧಪಟ್ಟದ್ದು. ನೀವು ಪ್ರಶ್ನೆ ಮಾಡಿರತಕ್ಕಂತಹ ಪ್ರಶ್ನೆಯು ಈ ಪ್ರಶ್ನೆಗೆ ಸಂಬಂಧಪಟ್ಟಿದ್ದುದು ಅಲ್ಲ. ಅದಕ್ಕೆ ಅಲರ್ಟ್ ಆಗಿರಬೇಕು. ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಕಡಪಟ್ಟಿ ಸಮಿತಿಯವರು ಏನು ವರದಿಯನ್ನು ಕೊಟ್ಟಿದ್ದಾರೆ, ಅದನ್ನು ಜಾರಿಗೆ ತಂದರೆ ಹೆಚ್ಚು ಲಾಭವಾಗುತ್ತದೆ.

ಅಧ್ಯಕ್ಷರು:- ಜಿಲ್ಲಾವಾರು ಕೊಡುವುದಿಲ್ಲ, ಪ್ರಾಂತ್ಯವಾರು ಇರತಕ್ಕಂಥ ಅಸಮಾನತೆಯನ್ನು ತೊಲಗಿಸುವಂತೆ ಮಾಡಿ ಸರಿ ಮಾಡತಕ್ಕಂತಹ ಒಂದು ಪ್ರಮಾಣದ ಪ್ರಯತ್ನ. ಅದಕ್ಕೆ ಸರ್ಕಾರದವರು ಏನು ಹೇಳುತ್ತಿದ್ದಾರೆಂದರೆ, 1997-98ರೊಳಗೆ ಅದನ್ನು ಆಚರಣೆಗೆ ತರುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆಂದು ಹೇಳುತ್ತಿದ್ದಾರೆ. ನೀವು ಪ್ರಸ್ತಾಪ ಮಾಡುತ್ತಿರುವಂತಹ ವಿಚಾರ ಬೇರೇನೆ ಆಗುತ್ತದೆ. ತಾವು ನೋಟೀಸ್ ಕೊಟ್ಟರೆ ಮಂತ್ರಿಗಳಿಂದ ಉತ್ತರವನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು:- ಶಿವಪ್ಪನವರೇ, ನಿಮ್ಮ ಚು.ಪ್ರ.47 (505) ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಕಳುಹಿಸಿದ್ದಾರೆ ಅದು ನಗರಾಭಿವೃದ್ಧಿ ಮಂತ್ರಿಗಳಿಗೆ ಹೋಗಿದೆ. ಆದ್ದರಿಂದ ಇದರ ಬಗ್ಗೆ ಸ್ವಲ್ಪ ಸಮಯ ತೆಗೆದುಕೊಂಡು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಪ್ರಶ್ನೆಗಳು ಬರುವ ದಿವಸ ಉತ್ತರ ಕೊಡಿಸುತ್ತೇನೆ.

ಶ್ರೀ ಬಿ.ಬಿ.ಶಿವಪ್ಪ:- ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನನ್ನ ಒಂದು ಅರಿಕೆ ಎಂದರೆ, ನಾನು ಈ ಪ್ರಶ್ನೆಯನ್ನು ಮೇಲ್ಮನೆ ಸದಸ್ಯನಾಗಿದ್ದ ಕಾಲದಿಂದ ಅಂದರೆ ಸುಮಾರು 10 ವರ್ಷಗಳಿಂದ ಬೇರೆ ಬೇರೆ ರೀತಿಯಲ್ಲಿ, ಬೇರೆ ಬೇರೆ ರೂಪದಲ್ಲಿ ಕೇಳುತ್ತಿದ್ದೇನೆ. ಆ ಗ್ರಾಮಕ್ಕೆ ಕುಡಿಯುವ ನೀರನ್ನು ಕೊಡಬೇಕೆಂದು ಸರ್ಕಾರ ತೀರ್ಮಾನವನ್ನು ತೆಗೆದುಕೊಂಡು 8-10 ವರ್ಷಗಳಾದರೂ ಅದರ ಅಂದಾಜು ಪ್ರತಿವರ್ಷ ಹೆಚ್ಚುತ್ತಾ ಹೋಗುತ್ತಿದ್ದು ಇತ್ತೀಚೆಗೆ ಅದು ಬದಲಾವಣೆ ಆಗಿದೆ. ಮುಂದೆ ಇನ್ನೆಷ್ಟು ವರ್ಷವಾಗುತ್ತದೆಯೋ ಗೊತ್ತಿಲ್ಲ.

ಅಧ್ಯಕ್ಷರು:- ನೀವು ಮನಸ್ಸು ಮಾಡಿದರೆ ಸ್ವಂತ ಖರ್ಚಿನಲ್ಲೇ ಮಾಡಿಸಿಬಿಡಬಹುದು. ಸರ್ಕಾರಕ್ಕೆ ಏತಕ್ಕೆ ಕಾಯುತ್ತೀರಿ?

ಶ್ರೀ ಬಿ.ಬಿ.ಶಿವಪ್ಪ:- ತಾವು ಅಪ್ಪಣೆ ಕೊಟ್ಟರೆ ಅದನ್ನಾದರೂ ಮಾಡುತ್ತೇನೆ. ಸರ್ಕಾರ ಅದನ್ನು ಹೇಳಿದರೆ ಖಂಡಿತ ನಾನು ಮಾಡಿಸಿಬಿಡುತ್ತೇನೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಶಿವಪ್ಪನವರೇ, ಇದನ್ನು ನೀವು ಮಾಡಿಸಿ ಎಂದು ಸರ್ಕಾರ ಹೇಳಿದರೆ ನಾನು ಮಾಡಿಸಿಬಿಡುತ್ತೇನೆ.

ಶ್ರೀ ಸಿದ್ಧರಾಮಯ್ಯ:- ಸ್ವಂತ ಮಾಡಿಸಿಕೊಡುವುದಕ್ಕೆ ಯಾರ ಅಪ್ಪಣೆಯೂ ಬೇಕಾಗಿಲ್ಲ. ಕೆರೆ ನೀರಿಗೆ ದೊಣ್ಣೆನಾಯಕನ ಅಪ್ಪಣೆಯೇ ಎನ್ನುವಂತೆ.

ಶ್ರೀ ಬಿ.ಬಿ.ಶಿವಪ್ಪ:- ಸದನದಲ್ಲಿ ನಾನು ಈ ಪ್ರಶ್ನೆಯನ್ನು ಕೇಳುತ್ತಿರುವುದರಿಂದ ತಾವು ಇಲ್ಲಿ ಉತ್ತರವನ್ನು ಹೇಳಬೇಕಾಗಿರುವುದರಿಂದ ಈ ಮಾತನ್ನು ಸದನದಲ್ಲಿ ತಾವು ಹೇಳಿದರೆ ನಾನು ಮಾಡಿಸುತ್ತೇನೆ.

ಅಧ್ಯಕ್ಷರು:- ಮುಂದೆ ನಗರಾಭಿವೃದ್ಧಿ ಮಂತ್ರಿಗಳಿಂದ ನಿಮಗೆ ಉತ್ತರವನ್ನು ತರಿಸಿಕೊಡುತ್ತೇನೆ.

ವಿಷಯ:- ಉಡುಪಿ ತಾಲ್ಲೂಕಿನ ಶಿರಿಯಾರ ಗ್ರಾಮದ ಸ್ಯಾಬ್ರಕಟ್ಟೆಯಲ್ಲಿ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 48 (268)

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ಉಡುಪಿ ತಾಲ್ಲೂಕು ಶಿರಿಯಾರ ಗ್ರಾಮದ ಸ್ಯಾಬ್ರಕಟ್ಟೆಯಲ್ಲಿ ಪದವಿ ಪೂರ್ವ